ದಿನಾಂಕ **: 22.11.2025** ರಂದು ಪಿಡಬ್ಲ್ಯೂ - 1 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

<u>ಪಾಟೀ ಸವಾಲುಃ</u> ಶ್ರೀಮತಿ ಆರ್.ಹೆಚ್., 2 ನೇ ಎದುರುದಾರರ ಪರ ವಕೀಲರಿಂದಃ

ಅಪಘಾತವಾಗಿದೆ ಎಂದು ಹೇಳುವ ಸ್ಥಳ ಸಾಕಷ್ಟು ಜನ ಸಂಚಾರ ಮತ್ತು ವಾಹನ ದಟ್ಟನೆ ಇರುವಂತಹ ಸ್ಥಳ ಎಂದರೆ ಸರಿ. ನಾನು ದ್ವಿಚಕ್ರ ವಾಹನದಲ್ಲಿ ಮೂಡಬಿದ್ರೆಯಲ್ಲಿ ನಮ್ಮ ಮನೆಯಿಂದ ಮೂಡಬಿದ್ರೆ ಪೇಟೆ ಕಡೆಗೆ ಹೋಗುತ್ತಿದ್ದೆ. ಅಪಘಾತವಾಗಿದೆ ಎಂದು ಹೇಳುವ ಸ್ಥಳವು ನಾಲ್ಕು ಕಡೆಯಿಂದ ವಾಹನಗಳು ಬರುತ್ತಿದ್ದ ಸ್ಥಳ ಎಂದರೆ ಸರಿ. ನಾನು ಹೋಗುತ್ತಿದ್ದ ದ್ವಿಚಕ್ರ ವಾಹನದಲ್ಲಿ ಅದೇ ಸ್ಥಳದಲ್ಲಿ ನಾನು ನಿಲ್ಲಿಸಿದ್ದೆ ಎಂದರೆ ಸರಿ. ಮುಂದುವರಿದು ಪೋಲೀಸರು ನನ್ನನ್ನು ನಿಲ್ಲಿಸಿದ್ದರು ಎಂದು ನುಡಿಯುತ್ತೇನೆ. ಪೋಲೀಸರು ನನ್ನನ್ನು ನಿಲ್ಲಿಸಿದ್ದರು ಎಂದು ನಾನು ನೀಡಿದ ದೂರಿನಲ್ಲಿ ಪೋಲೀಸರ ಮುಂದೆ ತಿಳಿಸಿದ್ದೇನೋ ಇಲ್ಲವೋ ಎಂದು ನನಗೆ ನೆನಪಿಲ್ಲ. ಪೋಲೀಸರು ನನ್ನನ್ನು ನಿಲ್ಲಿಸಿರುವುದಿಲ್ಲ ಮತ್ತು ನಾನು ದ್ವಿಚಕ್ರ ವಾಹನವನ್ನು ಚಲಾಯಿಸುತ್ತಿದ್ದ ಸ್ಥಿತಿಯಲ್ಲಿಯೇ ನನ್ನ ವಾಹನವನ್ನು ಏಕಾಏಕಿ ನಿಲ್ಲಿಸಿದ ಕಾರಣ ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ.

ನಾನು ಒಳರೋಗಿಯಾಗಿ ಒಂದು ಬಾರಿ ಮಾತ್ರ ದಾಖಲಾಗಿದ್ದು, ಆ ಸಮಯದಲ್ಲಿ ಸುಮಾರು 4 ದಿನ ಆಸ್ಪತ್ರೆಯಲ್ಲಿ ದಾಖಲಾಗಿದ್ದೆ. ನನಗೆ ಶಸ್ತ್ರ ಚಿಕಿತ್ಸೆ ಮಾಡಿ ಪ್ಲೇಟ್ ಮತ್ತು ನೇಲ್ಸ್ ಗಳನ್ನು ಒಳಜೋಡಣೆ ಮಾಡಿದ್ದಾರೆ. ನಾನು ಹೊರರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ ಎಂದು ಹೇಳಿದ್ದು, ಅದರ ಬಗ್ಗೆ ಬಿಲ್ಲುಗಳನ್ನು ಹಾಜರುಪಡಿಸಿದ್ದೇನೆ. ಆದರೆ ಹೊರರೋಗಿ ಚೀಟಿಯನ್ನು ನೀಡಿರುವುದಿಲ್ಲ. ವೈದ್ಯರ ಬಳಿ ಇರುತ್ತದೆ. ನಾನು ಹೇಳಿದಷ್ಟು ಖರ್ಚುಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಕನ್ಸಲ್ಟಿಂಗ್ ಇಂಜಿನಿಯರ್ ಆಗಿದ್ದೇನೆ. ಸ್ವಂತ ಉದ್ಯೋಗ ಇರುತ್ತದೆ. ಈಗ ಸದರಿ ಉದ್ದಿಮೆಯನ್ನು ನಿಲ್ಲಿಸಿರುತ್ತೇನೆ. ಉದ್ದಿಮೆ ಲೈಸೆನ್ಸ್ ನ್ನು ನಾನು ಕಳೆದ 2 ವರ್ಷದಿಂದ ನವೀಕರಿಸಿರುವುದಿಲ್ಲ. ಆದರೆ ಲೈಸೆನ್ಸನ್ನು ರದ್ದುಪಡಿಸಲು ಅರ್ಜಿ ನೀಡಿರುವುದಿಲ್ಲ. ನಾನು ಆದಾಯ ತೆರಿಗೆ ಪಾವತಿಸುತ್ತಿದ್ದೆ. ನಾನು ಕಳೆದ ವರ್ಷ ರಿಟನ್ಸ್ ಸಲ್ಲಿಸಿದ್ದೇನೆ. ಈ ವರ್ಷ ಸಲ್ಲಿಸಿರುವುದಿಲ್ಲ. ನಾನು ನನ್ನ ಉದ್ದಿಮೆಯನ್ನು ಸಂಪೂರ್ಣವಾಗಿ ಮುಚ್ಚಿದ್ದೇನೆ ಎಂದು ತೋರಿಸಲು ಬೇರೆ ಯಾವುದೇ ದಾಖಲೆ ಇರುವುದಿಲ್ಲ. ನನ್ನ ಬ್ಯಾಂಕ್ ಖಾತೆ ಇದ್ದು, ಅದನ್ನು ಹಾಜರುಪಡಿಸಬಹುದು. ನನ್ನ ಕೈಕೆಳಗೆ 20 ರಿಂದ 22 ಜನ ದಿನಕೂಲಿ ಆಧಾರದ ಮೇಲೆ ಕೆಲಸ ಮಾಡುತ್ತಿದ್ದರು. ಅದರ ಬಗ್ಗೆ ದಾಖಲೆಗಳು ಇರುವುದಿಲ್ಲ.

ನಾನು ವಾಹನ ಬಾಡಿಗೆಗಾಗಲೀ, ಪೌಷ್ಟಿಕ ಆಹಾರಕ್ಕಾಗಲೀ, ಪರಿಚಾರಕರ ಭತ್ಯೆಗಾಗಲೀ ಹಣ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಶಾಶ್ವತ ಅಂಗನ್ಯೂನತೆ ಆಗಿಲ್ಲ ಎಂದರೆ ಸರಿಯಲ್ಲ. ನನಗೆ ಭವಿಷ್ಯದ ಚಿಕಿತ್ಸೆಯ ಅಗತ್ಯ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಷ್ಟು ನಾನು ವೈದ್ಯಕೀಯ ಚಿಕಿತ್ಸೆಗೆ ಹಣ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಆದಾಯ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ. ನಾನು ಈಗಲೂ ಮೊದಲಿನಂತೆ ಕೆಲಸ ಮಾಡಲು ಶಕ್ತನಾಗಿದ್ದೇನೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತವಾಗಿರುವ ಕಾರಣ 2ನೇ ಎದುರುದಾರರು ನನಗೆ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಎಂಎಸಿಟಿ.,
ಕಾರ್ಕಳ.